**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ; ಕೊಪ್ಪ**

**ಸಿ.ಸಿ. ನಂಃ 659/2019**

**ಫಿರ್ಯಾದುದಾರರು** ಃ ಸರ್ಕಾರದ ಪರವಾಗಿ ಹರಿಹರಪುರ ಪೊಲೀಸರು.

ಃವಿಃ

**ಆರೋಪಿತರು** ಃ ಸಚೀಂದ್ರ ಹೆಚ್.ಜಿ., ಬಿನ್. ಗಿರೀಶ ಡಿ.ಎಂ.,
29 ವರ್ಷ, ಕಂಟ್ರ್ಯಾಕ್ಟರ್ ಕೆಲಸ, ವಾಸಃ ಕೆರೆಕಟ್ಟೆ,
ನೆಮ್ಮಾರ್, ಶೃಂಗೇರಿ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

- - -

**ದೋಷಾರೋಪಣೆ**

ಪ್ರಿಯಾ ರವಿ ಜೋಗಳೆಕರ್, ಬಿ.ಕಾಂ.,ಎಲ್.ಎಲ್.ಎಂ.; ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ; ಕೊಪ್ಪ, ಆದ ನಾನು ಮೇಲ್ಕಂಡ ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

ದಿನಾಂಕ 14.1.2019ರಂದು ರಾತ್ರಿ 7.30 ಗಂಟೆಯ ಸಮಯದಲ್ಲಿ ಹರಿಹರಪುರ ಪೊಲೀಸ್ ಠಾಣಾ ವ್ಯಾಪ್ತಿಯ ಭಂಡಿಗಡಿ ಗ್ರಾಮದ ಕೆಸುವಿನ ಮನೆಯಲ್ಲಿ ಚಾಸಾ 1 ಕುಮಾರ ಸ್ವಾಮಿ ಕೆ.ಎಸ್.ರವರ ಮನೆಯ ಮುಂಭಾಗದ ಮಣ್ಣು ರಸ್ತೆಯಲ್ಲಿ ನೀವು ಆರೋಪಿ ಮರಳಿನ ವ್ಯವಹಾರದ ಹಣದ ವಿಚಾರದಲ್ಲಿ ಚಾಸಾ 1 ಕುಮಾರ ಸ್ವಾಮಿ ಕೆ.ಎಸ್.ರವರನ್ನು ಅವಾಚ್ಯ ಶಬ್ದಗಳಿಂದ ಅವಮಾನವಾಗುವಂತೆ ನಿಂದಿಸಿ, ಅದರಿಂದ ಸಾರ್ವಜನಿಕ ಶಾಂತಿ ಮತ್ತು ನೆಮ್ಮದಿಗೆ ಭಂಗವನ್ನುಂಟು ಮಾಡಿ ಭಾ.ದಂ.ಸಂ. ಕಲಂ 504ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯದಲ್ಲಿ ಎಸಗಿರುತ್ತೀರಿ.

ಮೇಲ್ಕಂಡ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ನೀವು ಆರೋಪಿ ಮಾರಕಾಸ್ತ್ರವಾದ ಹೆಲ್ಮೆಟಿನಿಂದ ಚಾಸಾ 1 ಕುಮಾರ ಸ್ವಾಮಿ ಕೆ.ಎಸ್.ರವರ ತಲೆಯ ಮುಂಭಾಗಕ್ಕೆ ಹೊಡೆದು ಸ್ವಇಚ್ಛೆಯಿಂದ ಅವರಿಗೆ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿ ಭಾ.ದಂ.ಸಂ. ಕಲಂ 324ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯದಲ್ಲಿ ಎಸಗಿರುತ್ತೀರಿ.

Sachinder HL

ಮೇಲ್ಕಂಡ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ನೀವು ಆರೋಪಿ ಅಪರಾಧಿಕ ಭಯೋತ್ಪಾದನೆಯನ್ನುಂಟು ಮಾಡಿ ಚಾಸಾ 1 ಕುಮಾರ ಸ್ವಾಮಿ ಕೆ.ಎಸ್.ರವರನ್ನು ಕೊಲೆ ಮಾಡುವುದಾಗಿ ಹೆದರಿಸಿ ಪ್ರಾಣ ಬೆದರಿಕೆ ಹಾಕಿ ಭಾ.ದಂ.ಸಂ. ಕಲಂ 506ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯದಲ್ಲಿ ಎಸಗಿರುತ್ತೀರಿ.

ಪ್ರ:1: ಈಗ ಓದಿ ಹೇಳಿದ ದೋಷಾರೋಪಣೆ ತಿಳಿಯಿತೇ?

ಉ: ತಿಳಿಯಿತು

ಪ್ರ:2: ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆ ಆಗಬೇಕಾ?

ಉ: ವಿಚಾರಣೆ ಆಗಬೇಕು

ಈ ಮೇಲ್ಕಂಡ ದೋಷಾರೋಪಣೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಢೀಕರಿಸುತ್ತೇನೆ.

ದಿನಾಂಕ: 11ನೇ ದಿವಸ, ನವೆಂಬರ್ ಮಾಹೆ, 2021.

(ಪ್ರಿಯಾ ರವಿ ಜೋಗಳೇಕರ್)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ;ಕೊಪ್ಪ.